ಡನ್ನೋನ ಸಾಹಸ ಕಥೆಗಳು

06

ನಿಕೋಲಾಯ ನೋಸೊವ್ವ



ಡೂನೋನ ಬಲೂನು





ಡನ್ನೋನ ಸಾಹಸ ಕಥೆಗಳು

ನಿಕೋಲಾಯ ನೋಸೊವ್

06

ಡೂನೋನ ಬಲೂನು

ಚಿತ್ರಗಳುಃ ಬೋರಿಸ್ ಕಲೌಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಡೂನೋ ಒಬ್ಬ ಅತ್ಯುತ್ತಮ ಓದುಗನಾಗಿದ್ದು, ಆತನು ಅನೇಕ ಪ್ರವಾಸ ಪುಸ್ತಕಗಳನ್ನು ಓದಿದ್ದನು. ಆಗಾಗ ಸಂಜೆ ವೇಳೆಯಲ್ಲಿ ಅವನು ತಾನು ಓದಿದ್ದ ವಿಷಯಗಳನ್ನು ತನ್ನ ಸ್ನೇಹಿತರಿಗೆ ಹೇಳುತ್ತಿದ್ದನು. ಮೈಟ್ಸಗಳಿಗೆ ಅವನ ಕಥೆಗಳನ್ನು ಕೇಳುವುದು ತುಂಬಾ ಇಷ್ಟವಾಗುತ್ತಿತ್ತು. ಅವರು ಎಂದಿಗೂ ನೋಡದ ದೇಶಗಳ ಬಗ್ಗೆ ಕೇಳಲು ಇಷ್ಟಪಡುತ್ತಿದ್ದರು; ಆದರೆ ಅದಕ್ಕಿಂತಲೂ ಪ್ರಸಿದ್ಧ ಪ್ರವಾಸಿಗರ ಕುರಿತ ಕಥೆಗಳನ್ನು ಕೇಳುವುದನ್ನು ಇನ್ನಷ್ಟು ಇಷ್ಟಪಡುತ್ತಿದ್ದರು, ಏಕೆಂದರೆ ಅತ್ಯಂತ ವಿಚಿತ್ರವಾದ ಘಟನೆಗಳು ಯಾವಾಗಲೂ ಪ್ರವಾಸಿಗರಿಗೇ ಸಂಭವಿಸುತ್ತವೆ.

ಇಂತಹ ಹಲವಾರು ಕಥೆಗಳನ್ನು ಕೇಳಿದ ನಂತರ, ಮೈಟ್ಸಗಳು ತಾವೂ ಒಂದು ದೀರ್ಘ ಪ್ರಯಾಣಕ್ಕೆ ಹೋಗಬೇಕೆಂದು ತೀರ್ಮಾನಿಸಿದರು. ಅವರಲ್ಲಿ ಕೆಲವರು ಕಾಲ್ನಡಿಗೆಯಲ್ಲಿ ಪ್ರವಾಸ ಹೋಗೋಣ ಎಂದು ಸಲಹೆ ನೀಡಿದರು; ಇನ್ನೂ ಕೆಲವರು ದೋಣಿಗಳಲ್ಲಿ ಕುಳಿತು ನದಿಯ ಕೆಳಭಾಗದ ಕಡೆಗೆ ಹೊರಡೋಣ ಎಂದು ಹೇಳಿದರು.


"ಬನ್ನಿ, ನಾವು ಒಂದು ಬಲೂನು ತಯಾರಿಸಿ ಮುಗಿಲಲ್ಲಿ ಹಾರುವ." ಡೂನೋ ಹೇಳಿದನು:

ಈ ಸಲಹೆ ಅವರೆಲ್ಲರಿಗೂ ತುಂಬಾ ಹಿಡಿಸಿತು. ಅವರಲ್ಲಿ ಯಾರೂ ಇದುವರೆಗೆ ಆಕಾಶದಲ್ಲಿ ಹಾರಾಡಿರಲಿಲ್ಲ. ಹೀಗಾಗಿ ಅದು ಖಂಡಿತವಾಗಿಯೂ ಅದ್ಭುತ ಅನುಭವವಾಗಿರಬೇಕು ಎಂದು ಅವರು ಭಾವಿಸಿದರು. ಸಹಜವಾಗಿಯೇ, ಬಲೂನನ್ನು ಹೇಗೆ ಮಾಡಬೇಕು ಎಂಬುದು ಅವರಿಗೆ ತಿಳಿದಿರಲಿಲ್ಲ. ಆದರೆ ಡೂನೋ ತಾನು ಎಲ್ಲವನ್ನೂ ಚೆನ್ನಾಗಿ ಯೋಚಿಸಿ, ಅವರು ಏನೇನು ಮಾಡಬೇಕೆಂಬುದರ ಬಗ್ಗೆ ಹೇಳುತ್ತೇನೆ ಎಂದು ಹೇಳಿದನು.

ಇದರ ಬಗ್ಗೆ ಅವನು ಯೋಚಿಸಲು ಆರಂಭಿಸಿದನು. ಮೂರು ಹಗಲು ಮತ್ತು ಮೂರು ರಾತ್ರಿಗಳ ಕಾಲ ಯೋಚಿಸಿದ ನಂತರ, ಕೊನೆಗೆ ಬಲೂನನ್ನು ರಬ್ಬರ್‌ನಿಂದ ಮಾಡಬಹುದೆಂದು ತೀರ್ಮಾನಿಸಿದನು. ಮೈಟ್ಸ್‌ಗಳ ಬಳಿ ರಬ್ಬರ್ ಇತ್ತು. ಅವರ ಪಟ್ಟಣದಲ್ಲಿ ರಬ್ಬರ್ ಗಿಡಗಳಂತೆಯೇ ಕಾಣುವ ಅನೇಕ ಗಿಡಗಳು ಬೆಳೆಯುತ್ತಿದ್ದವು. ಅವರು ಆ ಗಿಡಗಳ ಕಾಂಡಗಳಲ್ಲಿ ಸಣ್ಣ ಸೀಳುಗಳನ್ನು ಮಾಡಿ, ಹೊರಗೆ ಹರಿದುಬರುವ ಹಾಲಿನಂಥ ರಸವನ್ನು ಸಂಗ್ರಹಿಸುತ್ತಿದ್ದರು. ಕ್ರಮೇಣ ಆ ರಸ ಗಟ್ಟಿಯಾಗಿ ರಬ್ಬರ್ ಆಗುತ್ತಿತ್ತು. ಅದರಿಂದ ಅವರು ರಬ್ಬರ್ ಚೆಂಡುಗಳು ಮತ್ತು ರಬ್ಬರ್ ದ ಮಳೆಗಾಲದಲ್ಲಿ ಹಾಕಿಕೊಳ್ಳುವ ಬೂಟುಗಳನ್ನು ತಯಾರಿಸುತ್ತಿದ್ದರು.

ಡೂನೋ ಬಲೂನನ್ನು ರಬ್ಬರ್‌ನಿಂದ ಮಾಡಬೇಕೆಂದು ತೀರ್ಮಾನಿಸಿದ ತಕ್ಷಣ, ರಸವನ್ನು ಸಂಗ್ರಹಿಸಿ, ಅದಕ್ಕಾಗಿ ಮೊದಲೇ ಸಿದ್ಧಪಡಿಸಿದ್ದ ದೊಡ್ಡ ಪೀಪಾಯಿಗೆ ಸುರಿಯಲು ಮೈಟ್ಸ್‌ಗಳನ್ನು ಕಳುಹಿಸಿದನು. ರಬ್ಬರ್ ಗಿಡಗಳ ಕಡೆಗೆ ಹೋಗುವ ದಾರಿಯಲ್ಲಿ ಡನ್ನೋ ತನ್ನ ಸ್ನೇಹಿತ ಗಂಕಿಯನ್ನು ಇಬ್ಬರು ಪುಟ್ಟ ಮೈಟ್ಸ ಹುಡುಗಿಯರ ಜೊತೆ ಕುಣಿಯುತ್ತ ಹೋಗುತ್ತಿರುವುದನ್ನು ಕಂಡನು.

”





“ಗಂಕಿ, ನಾವು ಏನು ಮಾಡಲು ಹೋಗುತ್ತಿದ್ದೇವೆ ಎಂಬುದು ನಿನಗೆ ತಿಳಿದರೆ ಅಸೂಯೆಪಟ್ಟು ಸತ್ತು ಹೋಗುತ್ತೀ,” ಎಂದು ಡನ್ನೋ ಹೇಳಿದನು.

“ನಾನೇನು ಸಾಯುವುದಿಲ್ಲ! ಸಾಯುವ ಯಾವುದೇ ಉದ್ದೇಶ ನನಗಿಲ್ಲ.” ಎಂದು ಗಂಕಿ ತಕ್ಷಣವೇ ಪ್ರತಿವಾದಿಸಿದನು.

“ನಿನಗೆ ಗೊತ್ತಾದರೆ ಅಸೂಯೆಯಿಂದ ಸತ್ತೇ ಹೋಗುತ್ತೀ!” ಎಂದು ಡನ್ನೋ ಹೀಯಾಳಿಸಿದನು.

“ಸರಿ, ಅದು ಏನು?” ಎಂದು ಗಂಕಿ ಕೇಳಿದನು.

“ನಾವು ಒಂದು ಬಲೂನು ತಯಾರಿಸಿ ಅದನ್ನು ಆಕಾಶಕ್ಕೆ ಹಾರಿಸಿ ಅದರಲ್ಲಿ ಕುಳಿತು ಹೋಗುವವರಿದ್ದೇವೆ!





ಗಂಕಿಗೆ ನಿಜವಾಗಿಯೂ ಹೊಟ್ಟೆಕಿಚ್ಚಾಯಿತು. ತಾನೂ ಯಾವುದಾದರೂ ವಿಷಯದಲ್ಲಿ ಹೆಮ್ಮೆಪಡಬೇಕೆಂದು ಅವನಿಗೆ ಅನಿಸಿತು, ಆದ್ದರಿಂದ ಅವನು ಹೇಳಿದನು:

"ಛೇ, ಬಲೂನು! ನನ್ನ ಬಳಿ ಆಟವಾಡಲು ಇಬ್ಬರು ಮೈಟ್ಸ ಹುಡುಗಿಯರು ಇದ್ದಾಗ ನನಗೆ ಬಲೂನ ಏಕೆ ಬೇಕು?"

"ಅವರು ಯಾರು?" ಎಂದು ಡನ್ನೋ ಕೇಳಿದನು.

"ಇವರೇ," ಎಂದು ಗಂಕಿ ತನ್ನ ಆಟದ ಸಂಗಾತಿಯರನ್ನು ತೋರಿಸುತ್ತಾ ಹೇಳಿದನು.

"ಅವಳ ಹೆಸರು ಪೀ-ವೀ, ಇವಳ ಹೆಸರು ಟಿಂಕಲ್."

ಪೀ-ವೀ ಮತ್ತು ಟಿಂಕಲ್ ಡನ್ನೋನತ್ತ ಅಸಡ್ಡೆಯಿಂದ ಕಣ್ಣಾಡಿಸಿದರು.

ಡನ್ನೋ ಅವರನ್ನು ಕೋಪದಿಂದ ನೋಡಿದನು.

"ಹಾಗಾದರೆ ವಿಷಯ ಹೀಗಿದೆಯೇ! ನೀನು ನನ್ನ ನಿಜವಾದ ಸ್ನೇಹಿತನೆಂದು ಭಾವಿಸಿದ್ದೆ." ಎಂದು ಅವನು ಗಂಕಿಗೆ ಹೇಳಿದನು.



“ನಾನು ನಿನ್ನ ಸ್ನೇಹಿತ ಹಾಗು ಅವರ ಸ್ನೇಹಿತ ಕೂಡ. ನಿಮ್ಮೆಲ್ಲರ ಜೊತೆಯೂ ನಾನು ಸ್ನೇಹಿತರಾಗಿರಬಾರದೇ?” ಎಂದು ಗಂಕಿ ಕೇಳಿದನು.

“ಇಲ್ಲ, ಆಗುವುದಿಲ್ಲ, ನೀನು ಮೈಟ್ಸ ಹುಡುಗಿಯರ ಸ್ನೇಹಿತನಾಗಿದ್ದರೆ, ನೀನೂ ಒಬ್ಬ ಮೈಟ್ಸ ಹುಡುಗಿ. ಈ ಕ್ಷಣವೇ ಅವರ ಜೊತೆ ಆಟವಾಡುವುದನ್ನು ನಿಲ್ಲಿಸು.” ಎಂದು ಡನ್ನೋ ಹೇಳಿದನು

“ಏಕೆ ನಿಲ್ಲಿಸಬೇಕು?”

“ನಾನು ಹೇಳಿದಂತೆ ಅವರ ಜೊತೆ ಆಟವಾಡುವುದನ್ನು ನಿಲ್ಲಿಸು; ಇಲ್ಲವಾದರೆ ನನ್ನ ಜೊತೆಗೆ ಮತ್ತೆ ಎಂದಿಗೂ ಆಟವಾಡಲು ಸಾಧ್ಯವಾಗುವುದಿಲ್ಲ.”



“ನನಗೆ ಅದರಿಂದ ಏನು!” ಎಂದು ಗಂಕಿ ಹೇಳಿದನು.

“ಅದನ್ನೇ ನಿನ್ನ ಪೀ-ವೀ ಮತ್ತು ಟಿಂಕಲ್‌ಗೂ ಕೊಡುತ್ತೇನೆ!”

ಡನ್ನೋ ತನ್ನ ಮುಷ್ಟಿಗಳನ್ನು ಬಿಗಿಹಿಡಿದು ಮೈಟ್ಸಹುಡುಗಿಯರ ಕಡೆಗೆ ಹೊರಟನು. ಗಂಕಿ ಅವನ ಮುಂದೆ ಹಾರಿ ಬಂದು ಅವನ ದವಡೆಗೆ ಒಂದು ಗುದ್ದು ಕೊಟ್ಟನು. ಇಬ್ಬರೂ ಹೊಡೆದಾಡಲು ಆರಂಭಿಸಿದರು; ಪೀ-ವೀ ಮತ್ತು ಟಿಂಕಲ್ ತುಂಬಾ ಹೆದರಿ ಓಡಿಹೋದರು.

“ಹಾಗಾದರೆ, ಆ ಹುಡುಗಿಯರ ಕಾರಣಕ್ಕೇ ನನ್ನ ದವಡೆಗೆ ಒಂದು ಗುದ್ದು ಕೊಟ್ಟೆಯಾ?” ಎಂದು ಡನ್ನೋ, ಗಂಕಿಯ ಮೂಗಿನ ಕಡೆಗೆ ಒಂದು ಹೊಡೆತವನ್ನು ಕೊಟ್ಟನು.



“ಅವರ ಬಗ್ಗೆ ಇಷ್ಟು ಕೆಟ್ಟ ಮಾತುಗಳನ್ನು ಹೇಳಬೇಕಾದ ಅಗತ್ಯವೇನು?” ಎಂದು ಗುಂಕಿ ತನ್ನ ಮುಷ್ಟಿಗಳನ್ನು ಬೀಸುತ್ತಾ ಹೇಳಿದನು.

“ನೀನೇನು ದೊಡ್ಡ ವೀರನಾ!” ಎಂದು ಡನ್ನೋ ಕೇಳಿದನು. ಹಾಗೆಂದು ಅವನು ತನ್ನ ಸ್ನೇಹಿತನ ತಲೆಯ ಮೇಲೆ ಅಷ್ಟು ಬಲವಾಗಿ ಹೊಡೆದನು. ಗುಂಕಿ ಬಹುತೇಕ ಕೆಳಗೆ ಬೀಳುವಂತಾಯಿತು. ಅವನು ಸ್ವಲ್ಪ ಚೇತರಿಸಿಕೊಂಡ ತಕ್ಷಣವೇ ಓಡಿಹೋದನು.

“ಇನ್ನು ನಿನ್ನ ಮತ್ತು ನನ್ನ ನಡುವೆ ಎಲ್ಲವೂ ಮುಗಿದಿದೆ! ಇನ್ನು ಮುಂದೆ ನಾನು ನಿನ್ನ ಜೊತೆ ಆಟ ಆಡುವುದಿಲ್ಲ!” ಎಂದು ಡನ್ನೋ ಅವನ ಹಿಂದೆ ಕೂಗಿದನು.

“ಆಡಬೇಡ! ಆದರೆ ಮೊದಲು ನೀನೇ ಬಂದು ಸ್ವಲ್ಪ ಸಮಯದ ಮೇಲೆ ಸಂಧಾನ ಮಾಡುತ್ತೀಯ.” ಎಂದು ಗುಂಕಿ ಹಿಂದಿರುಗಿ ಕೂಗಿದನು.

“ಇಲ್ಲ, ನಾನು ಬರುವುದಿಲ್ಲ. ನಾವು ಬಲೂನಿನಲ್ಲಿ ಹಾರಿ ಹೋಗುತ್ತಿದ್ದೇವೆ!”

“ಮೇಲ್ಛಾವಣಿಯಿಂದ ನೆಲಕ್ಕೆ ಹಾರಿ ಬಾ!”

“ಮೇಲ್ಛಾವಣಿಯಿಂದ ನೆಲಕ್ಕೆ ಹಾರೋದು ನೀನೇ!” ಎಂದು ಡನ್ನೋ ಕೂಗುತ್ತ ರಬ್ಬರ್ ಮರದ ರಸವನ್ನು ಸಂಗ್ರಹಿಸಲು ಹೊರಟನು.

ಪೀಪಾಯಿಯು ಮೇಲಿನವರೆಗೂ ತುಂಬಿದ ನಂತರ, ಡೂನೋ ಅದನ್ನು ಚೆನ್ನಾಗಿ ಕಲಕಿ, ಮೋಟಾರ್ ಟೈರ್‌ಗಳಿಗೆ ಗಾಳಿ ತುಂಬಲು ಬಳಸುತ್ತಿದ್ದ ಪಂಪನ್ನು ತಂದುಕೊಡಲು ಟ್ವಿಸ್ಟಮ್‌ಗೆ ಹೇಳಿದನು. ಡೂನೋ ಪಂಪಿಗೆ ಒಂದು ಉದ್ದವಾದ ರಬ್ಬರ್ ಕೊಳವೆಯನ್ನು ಜೋಡಿಸಿ, ಅದರ ತೆರೆದ ತುದಿಗೆ ರಬ್ಬರ್ ರಸವನ್ನು ಲೇಪಿಸಿ, ಟ್ವಿಸ್ಟಮ್‌ಗೆ ನಿಧಾನವಾಗಿ ಗಾಳಿ ತುಂಬಲು ಹೇಳಿದನು. ಟ್ವಿಸ್ಟಮ್ ಗಾಳಿ ತುಂಬುತ್ತಿದ್ದಂತೆ, ಆ ರಬ್ಬರ್ ರಸವು ಸಾಬೂನಿನ ಗುಳ್ಳೆಯಂತೆ ಉಬ್ಬತೊಡಗಿತು. ಡೂನೋ ಆ ಗುಳ್ಳೆಯ ಸುತ್ತಲೂ ಎಲ್ಲ ಕಡೆಯಿಂದಲೂ ರಬ್ಬರ್ ರಸವನ್ನು ಲೇಪಿಸುತ್ತಲೇ ಇದ್ದನು; ಟ್ವಿಸ್ಟಮ್ ಪಂಪನ್ನು ಚಲಾಯಿಸುತ್ತಲೇ ಇದ್ದನು. ಹೀಗೆ ಸ್ವಲ್ಪಸ್ವಲ್ಪವಾಗಿ ಆ ಗುಳ್ಳೆಯು ಒಂದು ಬಲೂನು ಆಗಿ ರೂಪುಗೊಂಡಿತು.



ಬಲೂನು ದೊಡ್ಡದಾಗಿ ಉಬ್ಬತೊಡಗಿತು. ಡೂನೋಗೆ ಅದರ ಎಲ್ಲ ಬದಿಗಳಿಗೂ ಲೇಪಿಸಲು ಆಗಲಿಲ್ಲ. ಆದ್ದರಿಂದ ಅವನು ಉಳಿದ ಮೈಟ್ಸಗಳಿಗೆ ಬ್ರಷ್‌ಗಳನ್ನು ತೆಗೆದುಕೊಂಡು ಬಂದು ತನಗೆ ಸಹಾಯ ಮಾಡಲು ಹೇಳಿದನು. ಎಲ್ಲರೂ ಕೆಲಸದಲ್ಲಿ ತೊಡಗಿದರು. ಡನ್ನೋನನ್ನು ಹೊರತುಪಡಿಸಿ ಪ್ರತಿಯೊಬ್ಬರಿಗೂ ಕೆಲಸ ಸಿಕ್ಕಿತು. ಅವನು ಮಾತ್ರ ಸುರಕ್ಷಿತ ಅಂತರದಲ್ಲಿ ಬಲೂನಿನ ಸುತ್ತಲೂ ಸುತ್ತುತ್ತಾ, ಸೀಟಿ ಹಾಕುತ್ತಾ, ಮಧ್ಯೆ ಮಧ್ಯೆ ತನ್ನೊಳಗೆ ಗುಣುಗುಟ್ಟುತ್ತಿದ್ದನು.

"ಇದು ಖಂಡಿತ ಸಿಡಿಯುತ್ತದೆ... ಇನ್ನೇನು ಕ್ಷಣದಲ್ಲೇ 'ಧಡಾಂ' ಎಂದು ಒಡೆದು ಹೋಗುತ್ತದೆ."

ಆದರೆ ಬಲೂನು ಒಡೆಯಲಿಲ್ಲ; ಬದಲಾಗಿ ಪ್ರತಿಯೊಂದು ನಿಮಿಷಕ್ಕೂ ಇನ್ನಷ್ಟು ದೊಡ್ಡದಾಗುತ್ತಲೇ ಹೋಯಿತು. ಅದು ಎಷ್ಟೋ ದೊಡ್ಡದಾಯಿತು ಎಂದರೆ, ಅದರ ಮೇಲ್ಭಾಗಕ್ಕೂ, ಬದಿಗಳಿಗೂ ಲೇಪಿಸಲು ಮೈಟ್ಸಗಳಿಗೆ ಅಂಗಳದಲ್ಲಿ ಬೆಳೆದಿದ್ದ ಒಂದು ಗಿಡವನ್ನು ಹತ್ತಬೇಕಾಯಿತು.

ಅವರು ಎರಡು ದಿನಗಳ ಕಾಲ ಕೆಲಸ ಮಾಡಿದರು. ಕೊನೆಗೆ ಆ ಬಲೂನು ಒಂದು ಮನೆಯಷ್ಟು ದೊಡ್ಡದಾಯಿತು. ಆಗ ಡೂನೋ ಗಾಳಿ ಹೊರಗೆ ಹೋಗದಂತೆ ಅದರ ಬಾಯಿಯನ್ನು ಒಂದು ಹಗ್ಗದಿಂದ ಬಿಗಿಯಾಗಿ ಕಟ್ಟಿದನು.

"ನಾವು ಇನ್ನೊಂದು ಕೆಲಸ ಮಾಡುವಷ್ಟರಲ್ಲಿ ಇದನ್ನು ಇಲ್ಲಿಯೇ ಒಣಗಲು ಬಿಡೋಣ."

ಗಾಳಿ ಅದನ್ನು ಹಾರಿಸಿಕೊಂಡು ಹೋಗದಂತೆ ಅವನು ಬಲೂನನ್ನು ಗಿಡಕ್ಕೆ ಕಟ್ಟಿ, ನಂತರ ಮೈಟ್ಸಗಳನ್ನು ಎರಡು ಗುಂಪುಗಳಾಗಿ ವಿಭಜಿಸಿದನು. ಒಂದು ಗುಂಪನ್ನು ರೇಷ್ಮೆ ಹುಳಗಳ ಕೋಶಗಳನ್ನು ಸಂಗ್ರಹಿಸಿ ದೊಡ್ಡ ರೇಷ್ಮೆಯ ಬಲೆ ತಯಾರಿಸಲು ಕಳುಹಿಸಿದನು; ಮತ್ತೊಂದು ಗುಂಪನ್ನು ಮರದ ತೊಗಟೆಯಿಂದ ದೊಡ್ಡ ಬುಟ್ಟಿಯನ್ನು ತಯಾರಿಸಲು ಕಳುಹಿಸಿದನು.



ಡೂನೋ ಮತ್ತು ಅವನ ಸ್ನೇಹಿತರು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದಾಗ, ಪಟ್ಟಣದಲ್ಲಿದ್ದ ಉಳಿದ ಮೈಟ್ಸಗಳು ಗಿಡಕ್ಕೆ ಕಟ್ಟಿದ್ದ ಬಲೂನನ್ನು ನೋಡಲು ಬಂದರು. ಅವರಲ್ಲಿ ಪ್ರತಿಯೊಬ್ಬರೂ ಅದನ್ನು ಮುಟ್ಟಲು ಬಯಸಿದರು, ಮತ್ತು ಕೆಲವರು ಅದನ್ನು ಮೇಲಕ್ಕೆ ಎತ್ತಲು ಕೂಡ ಪ್ರಯತ್ನಿಸಿದರು.

"ಇದು ತುಂಬಾ ಹಗುರಾಗಿದೆ, ಇದನ್ನು ಒಂದು ಕೈಯಿಂದಲೇ ಎತ್ತಬಹುದು." ಅವರಲ್ಲಿಯ ಒಬ್ಬನು ಹೇಳಿದನು.

"ಹೌದು, ಇದು ಹಗುರಾಗಿದೆ, ಇದು ಎಂದಿಗೂ ಮೇಲೆ ಏರಲಿಕ್ಕಿಲ್ಲ ಎಂದು ನನಗೆ ಅನ್ನಿಸುತ್ತದೆ," ಎಂದು ಸಿಂಕರ್ ಎಂಬ ಮೈಟ್ಸ ಹೇಳಿದನು.

"ಏಕೆ?" ಎಂದು ಉಳಿದವರು ಕೇಳಿದರು.

"ಇದು ಸಾಕಷ್ಟು ಹಗುರಾಗಿದ್ದರೆ ಈಗಲೇ ಮೇಲಕ್ಕೆ ಏರುತ್ತಿತ್ತು, ಇಲ್ಲಿ ನೆಲದ ಮೇಲೆ ಬಿದ್ದಿರುತ್ತಿರಲಿಲ್ಲ. ಇದು ಹಗುರಾಗಿರದೆ ತುಂಬಾ ಭಾರವಾಗಿದೆ." ಎಂದು ಸಿಂಕರ್ ಹೇಳಿದನು.

ಮೈಟ್ಸಗಳು ಇದರ ಬಗ್ಗೆ ಯೋಚಿಸಿದರು.

"ಹಂ, ಅದು ನಿಜವೇ," "ಇದು ತುಂಬಾ ಭಾರವಾಗಿದೆ. ಹಾಗಿರದಿದ್ದರೆ ಇದು ಹಾರಿ ಹೋಗುತ್ತಿತ್ತು." ಅವರಲ್ಲಿ ಒಬ್ಬನು ಹೇಳಿದನು.

ಅವರು ಡೂನೋನನ್ನು ಪ್ರಶ್ನಿಸಲು ಪ್ರಾರಂಭಿಸಿದರು.

"ಸ್ವಲ್ಪ ಕಾಯಿರಿ. ಬೇಗನೇ ಎಲ್ಲವೂ ಸ್ಪಷ್ಟವಾಗುತ್ತದೆ." ಅವನು ಹೇಳಿದನು.

ಇದರಿಂದ ಅವರಿಗೆ ಮೊದಲಿಗಿಂತಲೂ ಹೆಚ್ಚು ಅನುಮಾನ ಮೂಡಿತು, ಮತ್ತು ಸಿಂಕರ್ ಪಟ್ಟಣದಾದ್ಯಂತ ಅಹಿತಕರ ವದಂತಿಗಳನ್ನು ಹರಡತೊಡಗಿದನು.

"ಆ ಬಲೂನನ್ನು ಮೇಲಕ್ಕೆ ಏರಿಸುವಂತಹದ್ದು ಏನು ಇರಬಹುದು?" ಎಂದು ಅವನು ಕೇಳತೊಡಗಿದನು.





“ಯಾವುದೂ ಇರಲಾರದು. ಪಕ್ಷಿಗಳು ರೆಕ್ಕೆಗಳಿರುವುದರಿಂದ ಹಾರುತ್ತವೆ. ಆದರೆ ಆ ಬಲೂನ್ ಅನ್ನು ಯಾವುದೂ ಹಾರುವಂತೆ ಮಾಡಲಾರದು. ಅದು ಬೀಳುವುದಷ್ಟೇ ಮಾಡಬಲ್ಲದು.”

ಆ ಬಲೂನ್ ಮೇಲೆ ಈಗ ಯಾರಿಗೂ ನಂಬಿಕೆ ಉಳಿಯಲಿಲ್ಲ.

ಅವರು ಅದನ್ನು ಹಾಸ್ಯ ಮಾಡುತ್ತಿದ್ದರು. ಅವರು ಡೂನೋದ ಮನೆಗೆ ಬಂದು ಬೇಲಿಯ ಆಚೆ ನಿಂತು ನೋಡುತ್ತಾ ಹೀಗೆ ಹೇಳುತ್ತಿದ್ದರು:

“ನೋಡಿ, ನೋಡಿ! ಅದು ಹಾರುತ್ತಿದೆ! ಹಾ, ಹಾ, ಹಾ!”

ಆದರೆ ಡೂನೋ ಅವರ ಅಪಹಾಸ್ಯಕ್ಕೆ ಗಮನ ಕೊಡಲಿಲ್ಲ. ರೇಷ್ಮೆಯ ಬಲೆ ಸಿದ್ಧವಾದಾಗ, ಅದನ್ನು ಬಲೂನ್‌ನ ಮೇಲೆ ಹಾಕುವಂತೆ ಅವನು ಸಹಾಯಕರಿಗೆ ಹೇಳಿದನು.

“ನೋಡಿ! ಅವರು ಬಲೂನನ್ನು ಬಲೆಯಲ್ಲಿ ಹಿಡಿದಿದ್ದಾರೆ! ಅದು ಹಾರಿ ಹೋಗಿಬಿಡಬಹುದೆಂದು ಅವರಿಗೆ ಭಯ! ಹಾ, ಹಾ, ಹಾ!” ” ಎಂದು ಬೇಲಿಯ ಬಳಿ ನಿಂತಿದ್ದ ಮೈಟ್ಸಗಳು ಚೇಷ್ಟೆ ಮಾಡತೊಡಗಿದರು.

ಡೂನೋ ತನ್ನ ಸಹಾಯಕರಿಗೆ ಬಲೂನಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದು, ಅದನ್ನು ಗಿಡದ ಒಂದು ಕೊಂಬೆಗೆ ಕಟ್ಟಿ, ಬಲೂನ ನೆಲದಿಂದ ಮೇಲಕ್ಕೆ ಎತ್ತುವಂತೆ ಹೇಳಿದನು. ಸ್ವಿಫ್ಟಿ ಮತ್ತು ಟ್ವಿಸ್ಟಮ್ ಹಾಗೆಯೇ ಮಾಡಿದರು. ನಂತರ ಅವರು ಹಗ್ಗವನ್ನು ಕೈಯಲ್ಲಿ ಹಿಡಿದು ಗಿಡದ ಮೇಲೆ ಹತ್ತಿ ಎಳೆಯಲು ಆರಂಭಿಸಿದರು. ಇದನ್ನು ನೋಡಿ ಅಲ್ಲಿದ್ದವರು ಇನ್ನೂ ಜೋರಾಗಿ ನಗಲು ಆರಂಭಿಸಿದರು.

“ಹಾ, ಹಾ, ಹಾ! ಹಗ್ಗದಿಂದ ಎಳೆದು ಮೇಲಕ್ಕೆತ್ತಬೇಕಾದ ಬಲೂನು ಕೂಡ ಒಂದು ಬಲೂನೋ!”

“ಹೀಗೆ ಮಾಡುತ್ತಾರೆ ನೋಡಿ! ಅವರು ಬಲೂನ್‌ನ ಮೇಲೆ ಕಾಲು ಚಾಚಿ ಕುಳಿತು, ಹಗ್ಗವನ್ನು ಎಳೆದು ಅದನ್ನು ಮೇಲಕ್ಕೆ ಹೋಗುವಂತೆ ಮಾಡುತ್ತಾರೆ.” ಎಂದು ಸಿಂಕರ್ ಹೀಯಾಳಿಸಿದನು.

ಬಲೂನನ್ನು ನೆಲದಿಂದ ಮೇಲಕ್ಕೆ ಎತ್ತಿದಾಗ, ಬಲೆಯ ನಾಲ್ಕು ಮೂಲೆಗಳು ಕೆಳಗೆ ತೂಗುತ್ತಿದ್ದವು. ಆಗ ಡೂನೋ ತನ್ನ ಸಹಾಯಕರಿಗೆ ಆ ನಾಲ್ಕು ಮೂಲೆಗಳನ್ನು ಮರದ ತೊಗಟೆಯಿಂದ ಮಾಡಿದ ಬುಟ್ಟಿಗೆ ಕಟ್ಟಲು ಹೇಳಿದನು.





ಬುಟ್ಟಿಯು ಚೌಕಾಕಾರವಾಗಿದ್ದು, ಅದರ ನಾಲ್ಕೂ ಬದಿಗಳ ಸುತ್ತಲೂ ಬೆಂಚುಗಳಿದ್ದವು. ಪ್ರತಿಯೊಂದು ಬೆಂಚಿನ ಮೇಲೂ ನಾಲ್ಕು ಮೈಟ್ಸಗಳು ಕುಳಿತುಕೊಳ್ಳಬಹುದಿತ್ತು ಅವರು ಬುಟ್ಟಿಯ ನಾಲ್ಕು ಮೂಲೆಗಳಿಗೆ ಬಲೆಯನ್ನು ಕಟ್ಟಿ ಮುಗಿಸಿದ ನಂತರ, ಡೂನೋ ಬಲೂನು ಸಿದ್ಧವಾಗಿದೆ ಎಂದು ಹೇಳಿದನು. ಸ್ವಿಫ್ಟಿಗೆ ಈಗ ಅವರು ಅದರೊಳಗೆ ಹತ್ತಿ ಹಾರಿಹೋಗಬಹುದು ಎಂದು ಅನಿಸಿತು. ಆದರೆ ಮೊದಲು ಪ್ರತಿಯೊಂದು ಮೈಟ್ಸಗೂ ಒಂದು ಪ್ಯಾರಾಶೂಟ್ ಮಾಡಬೇಕೆಂದು ಡೂನೋ ಹೇಳಿದನು.

“ಏಕೆ?” ಎಂದು ಡನ್ನೋ ಕೇಳಿದನು.

“ಒಂದುವೇಳೆ ಬಲೂನು ಒಡೆದು ಹೋದರೆ? ಆಗ ನಿಮಗೆ ಪ್ಯಾರಾಶೂಟ್‌ನೊಂದಿಗೆ ಕೆಳಗೆ ಜಿಗಿಯಬೇಕಾಗುತ್ತದೆ.”

ಮರುದಿನವೆಲ್ಲ ಪ್ಯಾರಾಶೂಟ್‌ಗಳನ್ನು ಮಾಡುವುದರಲ್ಲೇ ಕಳೆಯಿತು. ಡೂನೋ ಅವುಗಳನ್ನು ಡ್ಯಾಂಡಿಲಿಯನ್ ಹೂಗಳಿಂದ ಹೇಗೆ ಮಾಡಬೇಕೆಂದು ಅವರಿಗೆ ತಿಳಿಸಿದನು. ಮತ್ತು ಪ್ರತಿಯೊಬ್ಬ ಪ್ರಯಾಣಿಕನೂ ತನ್ನದೇ ಆದ ಪ್ಯಾರಾಶೂಟ್ ತಯಾರಿಸಿದನು. ಪಟ್ಟಣದ ಜನರು ಗಿಡದಿಂದ ಅಲುಗಾಡದೆ ತೂಗುತ್ತಿದ್ದ ಬಲೂನ್‌ನ್ನು ನೋಡಿ, ಒಬ್ಬರಿಗೊಬ್ಬರು ಹೀಗೆ ಹೇಳಿದರು:

“ಅದು ಒಡೆದು ಹೋಗುವವರೆಗೆ ಅಲ್ಲೇ ತೂಗುತ್ತಿರುತ್ತದೆ. ಆ ಬಲೂನಿನಲ್ಲಿ ಯಾರೂ ಎಲ್ಲಿಗೂ ಹೋಗಲು ಶಕ್ಯವಿಲ್ಲ.”





“ನೀವು ಏಕೆ ಹೊರಡುತ್ತಿಲ್ಲ? ಬೇಗ ಹೊರಡಿ, ಅದು ಒಡೆದು ಹೋಗುವ ಮೊದಲು!” ಎಂದು ಅವರು ಬೇಲಿಯ ಆಚೆಯಿಂದ ಕೂಗಿದರು.
“ಚಿಂತಿಸಬೇಡಿ, ನಾವು ನಾಳೆ ಬೆಳಿಗ್ಗೆ ಎಂಟು ಗಂಟೆಗೆ ಹೊರಡುತ್ತೇವೆ.” ಎಂದು ಡೂನೋ ಹೇಳಿದನು.
ಅವರಲ್ಲಿಯ ಸಾಕಷ್ಟು ಮೈಟ್ಸಗಳು ನಗುತ್ತಿದ್ದರು. ಆದರೆ ಬಲೂನು ನಿಜವಾಗಿಯೂ ಮೇಲಕ್ಕೆ ಏರಬಹುದು ಎಂದು ಭಾವಿಸಿದ ಕೆಲವರು ಅದರಲ್ಲಿ ಇದ್ದರು.
“ಅದು ನಿಜವಾಗಿಯೂ ಮೇಲಕ್ಕೆ ಏರಿದರೆ? ನಾವು ಖಂಡಿತವಾಗಿಯೂ ನಾಳೆ ಬೆಳಿಗ್ಗೆ ಇಲ್ಲಿ ಬಂದು ನೋಡಬೇಕು.” ಎಂದು ಅವರು ಲೆಕ್ಕ ಹಾಕುತ್ತಿದ್ದರು.







